**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.</u>**

**C.C. No. 1067/2021**

CW-1
PW-1

ಸಾಕ್ಷಿದಾರರ ಹೆಸರು : ತಿಮ್ಮರೆಡ್ಡಿ

ತಂದೆಯ ಹೆಸರು : ಭೀಮಣ್ಣ

ವಯಸ್ಸು : 28 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಜೂಕುರು

ದಿನಾಂಕ 12.02.2024 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ</u>**

ಚಾಸಾ-6 ನನ್ನ ಚಿಕ್ಕಮ್ಮ. ಚಾಸಾ-7 ನನ್ನ ಚಿಕ್ಕಪ್ಪ. ಚಾಸಾ-8 ನನ್ನ ಮಾವ. ಚಾಸಾ-2 ರಿಂದ 5, 8 ರಿಂದ 12 ಗೊತ್ತು. ಆರೋಪಿತರು ಗೊತ್ತು. ಮೃತ ಆಂಜನೆಯ್ಯ ನನ್ನ ಚಿಕ್ಕಪ್ಪ. ದಿಃ 09-10-2020 ರಂದು ಬೆ.8.00 ಗಂಟೆ ಸುಮಾರಿಗೆ ನನ್ನ ಚಿಕ್ಕಪ್ಪ ಆಂಜನೆಯ್ಯ ಹಾಗೂ ಚಾಸ-6 ಕೂಡಿಕೊಂಡು ಅವರ ಹೊಲದ ಪಕ್ಕದಲ್ಲಿ ಇದ್ದ ತಾಯಮ್ಮ ದೇವಸ್ಥಾನಕ್ಕೆ ಕಾಯಿ ಹೊಡೆಯಲು ಹೋಗಿ, ಕಾಯಿ ಹೊಡೆದ ನಂತರ ವಾಪಸು ಬರುವಾಗ ವಿದ್ಯುತಚ್ಛಕ್ತಿ ಕಂಬಗಳಿಂದ ಜೋತು ಬಿದ್ದ ವೈರ್ ನನ್ನ ಚಿಕ್ಕಪ್ಪನ ತಲೆಗೆ ತಾಗಿ ವಿದ್ಯುತ್ಸ್ಪರ್ಶವಾಗಿರುತ್ತದೆ. ಅದನ್ನು ಬಿಡಲು ಹೋದ ಚಾಸಾ-6 ರಿಗೆ ವಿದ್ಯುತ್ಸ್ಪರ್ಶ ಆಗಿ ಕೆಳಗಡೆ ಬಿದ್ದಿರುತ್ತಾರೆ. ಅದರಿಂದ ನನ್ನ ಚಿಕ್ಕಪ್ಪನ ತಲೆಗೆ ಗಾಯ ಆಗಿ, ಬಾಯಿಯಿಂದ ರಕ್ತ ಬಂದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಚಾಸಾ-6 ರ ತಲೆಗೆ ಪೆಟ್ಟು ಬಿದ್ದಿತ್ತು. ಅವರು ಕಿರಿಚಿದ ಶಬ್ದ ಕೇಳಿ ನಾನು ಮತ್ತು ಚಾಸಾ-8 ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಚಿಕ್ಕಪ್ಪ ಮೃತಪಟ್ಟಿದ್ದ. ನಂತರ ಗ್ರಾಮದವರಿಗೆ ಮಾಹಿತಿಯನ್ನು ತಿಳಿಸಿ ಅವರನ್ನು ಮಾನ್ವಿ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ.

2. ಈ ಘಟನೆಯ ಮೊದಲು ನಾವು ಕಂಬದ ವಿದ್ಯುತ್‌ಶಕ್ತಿ ವೈರನ್ನು ಸರಿಪಡಿಸುವಂತೆ ಹಲವಾರು ಸಲ ಕೆ.ಇ.ಬಿ ಅಧಿಕಾರಿಗಳಿಗೆ ಮನವಿ ಮಾಡಿದ್ದೆವು ಆದರೆ ಅವರು ಸರಿಪಡಿಸಿರುವುದಿಲ್ಲ. ಘಟನೆಯು ಕೆ.ಇ.ಬಿ ಅಧಿಕಾರಿಗಳ ನಿರ್ಲಕ್ಷತನದಿಂದ ಆಗಿದ್ದು, ಅದರಿಂದ ನನ್ನ ಚಿಕ್ಕಪ್ಪ ಮೃತಪಟ್ಟಿರುತ್ತಾರೆ. ನನ್ನ ಚಿಕ್ಕಮ್ಮನಿಗೆ ಗಾಯಗಳು ಆಗಿರುತ್ತವೆ. ನಾನು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ನಾನು ನೀಡಿದ ದೂರು ನೋಡುತ್ತಿದ್ದು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಘಟನೆಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರ ನಿರ್ಲಕ್ಷತನದಿಂದ ಜರುಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಮ್.ಎಮ್ ವಕೀಲರಿಂದಃ</u>**

1. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಎಮ್.ಎ ಬಿ.ಎಡ್ ಪದವೀಧರ. ಮೃತ ಆಂಜನೆಯ್ಯ ಇವರಿಗೆ ಒಂದು ಗಂಡು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ಅವರೆಂದರೆ ನಾಗಮ್ಮ, ಮಂಜುಳಾ, ಶಾರದ, ಮಹೇಶ್ವರಿ ಮತ್ತು ರವಿ ಕುಮಾರ. ಈ ಪ್ರಕರಣ ದಾಖಲಿಸಿದಾಗ ನಾವು ಮತ್ತು ಮೃತ ನನ್ನ ಚಿಕ್ಕಪ್ಪ ಕೂಡಿಯೇ ಇದ್ದೆವು. ನಾವು ಮತ್ತು ಮೃತನ ಕುಟುಂಬ ಬೇರೆ ಬೇರೆ ವಾಸ ಮಾಡುತ್ತಾ ಇರುತ್ತೇವೆ ಅಂದರೆ ಸರಿಯಲ್ಲ. ನಮ್ಮ ಮತ್ತು ಮೃತನ ಕುಟುಂಬದ ಮಧ್ಯ ಇರುವ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಜಮೀನು ಸರ್ವೆ ನಂ. 113 ಮೃತ ನನ್ನ ಚಿಕ್ಕಪ್ಪ, ನನ್ನ ತಂದೆ ಮತ್ತು ಇತರ ಸಹೋದರರ ಮಧ್ಯ ಜಂಟಿಯಾಗಿ ಇದೆ ಅಂದರೆ ಸರಿ. ಜಮೀನು ಸರ್ವೆ ನಂ. 113 ಮೃತ ಆಂಜನೆಯ್ಯ ಉಳುಮೆ ಮಾಡುತ್ತಿದ್ದ ಅಂದರೆ ಸರಿ. ಸದರಿ ಜಮೀನಿನ ಉತ್ತರಕ್ಕೆ ಕೇನಲ್ ನಂತರ ನನ್ನ ತಂದೆ ಹೆಸರಿನಲ್ಲಿ ಮತ್ತು ಉಳಿದ ನನ್ನ ಚಿಕ್ಕಪ್ಪಂದಿರ ಹೆಸರಿನಲ್ಲಿ ಜಮೀನುಗಳು ಇವೆ ಅಂದರೆ ಸರಿ. ಸದರಿ ಜಮೀನು ಸರ್ವೆ ನಂಬರ ನಿಖರವಾಗಿ ಗೊತ್ತಿಲ್ಲ. ಸರ್ವೆ ನಂ. 123/2 ಕ್ಷೇತ್ರ 4 ಎಕರೆ ಮತ್ತು ಸರ್ವೆ ನಂ. 123/4 ಕ್ಷೆತ್ರ 4 ಎಕರೆ ಅಂದರೆ ಸರಿ. ಸರ್ವೆ ನಂ. 122 ನನ್ನ ತಂದೆಯ ಹೆಸರಿನಲ್ಲಿ ಇದೆ ಅಂದರೆ ಸರಿ. ಸದರಿ ಜಮೀನುಗಳು ನೀರಾವರಿ ಜಮೀನುಗಳು. ಸದರಿ ಜಮೀನು ನೀರಾವರಿ ಜಮೀನುಗಳು ಅಂದರೆ ಸರಿಯಲ್ಲ. ನಮ್ಮ ಕುಟಂಬಕ್ಕೆ ಇರುವ ಆಸ್ತಿಗಳ ವಿಭಾಗ ಮಾಡುವ ವಿಷಯವಾಗಿ ನನ್ನ ತಂದೆ ಮತ್ತು ಅವರ ಸಹೋದರರ ಮಧ್ಯ ತಕರಾರು ಇತ್ತು ಅಂದರೆ

ಸರಿಯಲ್ಲ. ಆ ಕಾರಣಕ್ಕಾಗಿ ನಾವು ಮತ್ತು ಮೃತರ ಕುಟುಂಬದವರು ಮಾಡನಾಡುತ್ತಿರಲಿಲ್ಲ ಅಂದರೆ ಸರಿಯಲ್ಲ.

2. ಜೂಕುರು ಗ್ರಾಮದಿಂದ ನಮ್ಮ ಜಮೀನು ಅರ್ಧ ಕಿ.ಮಿ ದೂರದಲ್ಲಿ ಇದೆ. ಗ್ರಾಮದಿಂದ ನಮ್ಮ ಜಮೀನು 2 ರಿಂದ 3 ಕಿ.ಮಿ ದೂರದಲ್ಲಿ ಇದೆ ಅಂದರೆ ಸರಿಯಲ್ಲ. ನಾವು ನಮ್ಮ ಜಮೀನುಗಳಿಗೆ ಆರ್.ಡಿ.ಎಸ್ ಕೇನಲ್ ಮುಖಾಂತರ ಹೋಗಿ ಬರುವದು ಮಾಡುತ್ತೇವೆ ಅಂದರೆ ಸರಿ. ಸದರಿ ರಸ್ತೆ ಕಚ್ಚಾ ರಸ್ತೆ ಅಂದರೆ ಸರಿ. ನಮ್ಮ ಗ್ರಾಮದಿಂದ ಜಮೀನಿಗೆ ಹೋಗಬೇಕಾದರೆ ಸುಮಾರು ಅರ್ಧ ತಾಸು ಬೇಕಾಗುತ್ತದೆ ಅಂದರೆ ಸರಿಯಲ್ಲ. ದಿಃ 09-10-2020 ರಂದು ಮೃತ ಹಾಗೂ ಚಾಸಾ-6 ಕೂಡಿಕೊಂಡು ತಮ್ಮ ಜಮೀನಿಗೆ ಹೋಗಿದ್ದರು. ಆಗ ಬೆ.8.00 ಗಂಟೆ ಆಗಿತ್ತು. ಆ ದಿನ ಹೊಲಕ್ಕೆ ನಡೆದುಕೊಂಡು ಹೋಗಿದ್ದರು. ನಾವು ಕೂಡ ಜಮೀನಿಗೆ ನಡೆದುಕೊಂಡು ಹೋಗುತ್ತೇವೆ. ಜೂಕುರುದಿಂದ ನಮ್ಮ ಜಮೀನು ಪಶ್ಚಿಮ ದಿಕ್ಕಿಗೆ ಇವೆ ಅಂದರೆ ಸರಿಯಲ್ಲ. ಸಾಕ್ಷಿ ಉತ್ತರ ದಿಕ್ಕಿಗೆ ಇವೆ ಎಂದು ಹೇಳುತ್ತಾರೆ. ಜಮೀನು ಸರ್ವೆ ನಂ. 113/1 ಕ್ಷೇತ್ರ 2 ಎಕರೆ ಆರ್.ಡಿ.ಎಸ್ ಕಾಲುವೆಗೆ ಹೊಂದಿಕೊಂಡು ಇದೆ ಅಂದರೆ ಸರಿ. ಆ ದಿನ ನಮ್ಮ ಚಿಕ್ಕಪ್ಪ ಮತ್ತು ಚಾಸ-6 ಹೊಲದ ಪಕ್ಕದಲ್ಲಿ ಇರುವ ತಾಯಮ್ಮ ಗುಡಿಗೆ ಕಾಯಿ ಹೊಡೆಯಲು ಹೋಗಿದರು. ಮೃತನ ಜಮೀನಿಗೆ ಹೊಂದಿಕೊಂಡು ಸುಮಾರು 15 ರಿಂದ 20 ಫೀಟ್ ದೂರದಲ್ಲಿ ತಾಯಮ್ಮ ದೇವಸ್ಥಾನ ಇದೆ ಅಂದರೆ ಸರಿ. ನಾವು ಆ ದಿನ ಪಕ್ಕದ ಹೊಲ ಸರ್ವೆ ನಂ. 123 ರಲ್ಲಿ ನೀರು ಕಟ್ಟುತ್ತಿದ್ದೆವು. ಮೃತ ಆಂಜನೆಯ್ಯ ದೇವಸ್ಥಾನಕ್ಕೆ ಹೋಗಿ ವಾಪಸು ಬರದೇ ಇರುವುದರಿಂದ, ಚಾಸಾ-6 ನೋಡಿಕೊಂಡು ಹೋಗಿದ್ದಳು ಅಂದರೆ ಸರಿ. ಚಾಸಾ-6 ಹೋದಾಗ, ಆಂಜನೆಯ್ಯ ಕೆಳಗೆ ಬಿದ್ದು ಮೃತಪಟ್ಟಿರುವುದನ್ನು ನೋಡಿ ನಮಗೆ ಕರೆದಿರುತ್ತಾಳೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಾಸಾ-6 ಚೀರಾಟ ಮಾಡಿರುವ ಶಬ್ದ ಕೇಳಿ ಸ್ಥಳಕ್ಕೆ ಹೋಗಿರುತ್ತೇವೆ ಎಂದು ಹೇಳುತ್ತಾರೆ. ಮೃತನ ದೇಹವನ್ನು ಆಟೋದಲ್ಲಿ ಆಸ್ಪತ್ರೆಗೆ ತಂದಿರುತ್ತೇವೆ, ಆಟೋ ಸ್ಥಳಕ್ಕೆ ಸ್ಥಳಕ್ಕೆ ಎಷ್ಟು ಗಂಟೆಗೆ ಬಂದಿರುತ್ತದೆ ನನಗೆ ನೆನಪಿಲ್ಲ. ಮೃತನ ದೇಹವನ್ನು ನೋಡಿ ಚಾಸಾ-6 ಚೀರಿದಾಗ ಬೆ.9.00 ಗಂಟೆ ಆಗಿತ್ತು. ಜೂರುಕು ಗ್ರಾಮದಿಂದ ಮಾನ್ವಿ 27 ಕಿ.ಮಿ ದೂರದಲ್ಲಿ ಇದೆ. ಸುಮಾರು 1 ತಾಸಿನಲ್ಲಿ ಬರಬಹುದು. ಆ ದಿನ ಮೃತನೊಂದಿಗೆ ನಾನು, ಚಾಸಾ-6 ಮತ್ತು 7

ಆಟೋದಲ್ಲಿ ಮಾನ್ವಿಗೆ ಬಂದಿರುತ್ತೇವೆ. ಆಸ್ಪತ್ರೆಯ ವೈದ್ಯಾಧಿಕಾರಿಗಳು ಆ ಬಗ್ಗೆ ನಮ್ಮನ್ನು ವಿಚಾರಣೆ ಮಾಡಿರುತ್ತಾರೆ. ವೈದ್ಯಾಧಿಕಾರಿಗಳು ಪೋಲಿಸರಿಗೆ ಎಮ್.ಎಲ್.ಸಿ ಮಾಹಿತಿ ನೀಡಿಲ್ಲ. ನಾವೇ ಹೋಗಿ ದೂರು ನೀಡಿರುತ್ತೇವೆ. ನಾವು ದೂರು ನೀಡಿದ ನಂತರ ಸಾಯಂಕಾಲ ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿರುತ್ತಾರೆ.

೩. ಪೋಲಿಸ್ ಠಾಣೆಗೆ ನನ್ನ ಜೊತೆ ನಮ್ಮ ಗ್ರಾಮದರಾದ ಚಾಸಾ-೮ ಬಂದಿದ್ದರು. ಪೋಲಿಸ್ ಠಾಣೆಗೆ ಹೋದಾಗ ಮ.೧.೦೦ ಗಂಟೆ ಆಗಿತ್ತು.

**ಈ ಹಂತದಲ್ಲಿ ಶ್ರೀ. ಎಮ್.ಎಮ್ ವಕೀಲರು ಪ್ರಕರಣಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೆಳುತ್ತಾ ನ್ಯಾಯಾಲಯದ ಸಮಯ ವ್ಯರ್ಥ ಮಾಡುತ್ತಿದ್ದು, ಅದನ್ನು ಕೇಳಿದಕ್ಕೆ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಯಾವುದೇ ಕಾರಣಗಳು ಇಲ್ಲದೇ ಇರುವುದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು, ಮಾನ್ವಿ**